# ಅಬ್ಬಾ..ಈರುಳ್ಳಿ!








ಈರುಳ್ಳಿಯನ್ನು ಹೆಚ್ಚುವಾಗ ಕಣ್ಣೀರು ಬರುತ್ತದೆ. ಆದರೆ ಈಗಾಗಲೇ ಪೆನ್ಷನ್ ಪಡೆಯುತ್ತಿರುವ ಪೀಟರ್ ಗ್ಲೇಜ್ ಬ್ರೂಕ್ ಬೆಳೆದ ಭಾರೀ ತೂಕದ ನೀರುಳ್ಳಿಯನ್ನು ನೋಡಿದರೆ ಇತರೇ ರೈತರಿಗೆ ಹೊಟ್ಟೆಕಿಚ್ಚು ಖಂಡಿತಾ ಬರುತ್ತದೆ. ನಾಟಿಂಗ್‌ಹ್ಯಾಮ್ ಶೈರ್‌ನ ನ್ಯುವಾರ್ಕ್‌ನಲ್ಲಿ ವಾಸವಾಗಿರುವ 67 ವರ್ಷದ ಈ ಅಜ್ಜ ಬರೋಬ್ಬರಿ 8.15 ಕೆ.ಜಿ ಯಷ್ಟು ತೂಕದ ನೀರುಳ್ಳಿ ಬೆಳೆದು ಗಿನ್ನೆಸ್ ದಾಖಲೆ ನಿರ್ಮಿಸಿದ್ದಾನೆ!

ಕಳೆದ 25 ವರ್ಷಗಳಿಂದಲೂ ಅತೀ ದೊಡ್ಡ ನೀರುಳ್ಳಿಯನ್ನು ಬೆಳೆದು ದಾಖಲೆ ನಿರ್ಮಿಸಬೇಕೆಂಬ ಮಹದಾಸೆ ಹೊತ್ತಿದ್ದ ಪೀಟರ್ ಕನಸು ಈಗ ಕೈಗೂಡಿದೆ. ಇತ್ತೀಚೆಗೆ ನಡೆದ ಹ್ಯಾರೋಗೇಟ್ ಆಟಮ್ ಫ್ಲವರ್ ಷೋನಲ್ಲಿ ಸ್ಪರ್ಧೆಗೆ ಬಂದಿದ್ದ ಈತ ಇತರ ರೈತರನ್ನೆಲ್ಲ ಹಿಂದಿಕ್ಕಿ ದಾಖಲೆ ನಿರ್ಮಿಸಿದ. ವಿಶ್ವದಾಖಲೆ ಸ್ಥಾಪಿಸಿದಾಗ ಪೀಟರ್ ಹಾಗೂ ಈತನ ಪತ್ನಿ ಮೇರಿಗೆ ಸಂಭ್ರಮವೋ ಸಂಭ್ರಮ.

ದಾಖಲೆ ನಿರ್ಮಿಸಿದ ಈ ನೀರುಳ್ಳಿ 30 ಇಂಚು ಸುತ್ತಳತೆಯನ್ನು ಹೊಂದಿದ್ದು, ಮೇಲಿಂದ ಕೆಳಗಿನವರೆಗೆ 24 ಇಂಚು ಉದ್ದವಿದೆ.

ಅಂದ ಹಾಗೆ, ಈ ಪೀಟರಜ್ಜನಿಗೆ ವಿಶ್ವದಾಖಲೆ ಹೊಸತಲ್ಲ. ತನ್ನ 30 ವರ್ಷದ ತೋಟಗಾರಿಕೆ ವೃತ್ತಿಯಲ್ಲಿ 10 ಬಾರಿ ಈತ ವಿಶ್ವದಾಖಲೆಯನ್ನು ಮುರಿದಿದ್ದಾನೆ. ಈತ ಬೆಳೆದ ಅತೀ ದೊಡ್ಡ ಆಲೂಗಡ್ಡೆ, ಅತೀ ತೂಕದ ತರಕಾರಿ ಗಡ್ಡೆ ಹಾಗೂ ದೊಡ್ಡ ಬೀಟ್ ರೂಟ್ ಈಗಾಗಲೆ ಗಿನ್ನೆಸ್ ವಿಶ್ವದಾಖಲೆಯಲ್ಲಿ ಸ್ಥಾನ ಪಡೆದಿವೆ.

■ ವಿದ್ಯಾ ವಿ. ಹಾಲಭಾವಿ